ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 1549/25**

ಪಿಡಬ್ಲ್ಯುಃ – 4

ಸಿಡಬ್ಲ್ಯುಃ – 3

ದಿನಾಂಕಃ 28.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಬಾಲಕೃಷ್ಣ |
| ತಂದೆಯ ಹೆಸರು | – ಬೆಳ್ಳಿಯಪ್ಪ |
| ವಯಸ್ಸು | – 68 ವರ್ಷ |
| ವೃತ್ತಿ | – ವ್ಯವಸಾಯ |
| ವಾಸಸ್ಥಳ | – ಕುಂಬಳದಾಳು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–1, 2 ಮತ್ತು 4 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 11.04.2025 ರಂದು ಚಾಸಾ–1 ರವರ ಸ್ವತ್ತಿನಲ್ಲಿ ಆರೋಪಿತರು ಕಾಡು ಕಡಿದು ಶೆಡ್ ಹಾಕಿದ್ದ ವಿಚಾರವಾಗಿ ಪೊಲೀಸರು ಸ್ಥಳ ಮಹಜರು ಮಾಡುತ್ತಿದ್ದು, ಆಗ ನಾನು ಮತ್ತು ಚಾಸಾ–4 ಇದ್ದೆವು. ಪೊಲೀಸರಿಗೆ ಚಾಸಾ–1 ರವರು ಸ್ಥಳ ತೋರಿದ ಮೇರೆಗೆ ಪೊಲೀಸರು ನನ್ನ ಮತ್ತು ಚಾಸಾ–4 ರವರ ಸಮಕ್ಷಮ ನಿಪಿ–2 ರಂತೆ ಸ್ಥಳ ಮಹಜರು ಮಾಡಿರುತ್ತಾರೆ. ಆಗ ನಾನು ಸಹಿ ಮಾಡಿರುತ್ತೇನೆ. ಮಹಜರು ಕಾಲಕ್ಕೆ ಕೃತ್ಯ ಸ್ಥಳದ ನಕಾಶೆಯನ್ನು ಕೂಡ ಬರೆದಿರುತ್ತಾರೆ. ಅದನ್ನು ನೋಡಿದರೆ ಗುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ

ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ಪೊಲೀಸರು ಫೋಟೊಗಳನ್ನು ತೆಗೆದ್ದಿದು, ಅವುಗಳನ್ನು ನೋಡಿದರೆ ಗುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ–4 ಮತ್ತು 5 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ – ಆರೋಪಿತರ ಪರ ವಕೀಲರಾದ ಶ್ರೀ. ಕೆ ಕೆ ಆರ್ ರವರಿಂದಃ–

ಪೊಲೀಸರು ನನಗೆ ಮಹಜರಿಗೆ ಬರಲು ಹೇಳಿದ್ದರು, ಆದರೆ ನೋಟಿಸ್ ನೀಡಿಲ್ಲ. ಸದರಿ ದಿನ ನಾನು ಸಂಜೆ 5.00 ಗಂಟೆಗೆ ಪಟ್ಟಣಕ್ಕೆ ಹೊರಟಿದ್ದೆ, ಆಗ ಪೊಲೀಸರು ನನ್ನನ್ನು ಮಹಜರಿಗೆ ಕರೆದಿರುತ್ತಾರೆ. ನಾನು ಕೃತ್ಯ ಸ್ಥಳದಲ್ಲಿ ಸುಮಾರು 5 ನಿಮಿಷ ಕಾಲ ಇದ್ದೆ. ನನ್ನ ಮುಂದೆ ನಿಪಿ–2 ಮಹಜರು ಬರೆದಿಲ್ಲ, ಮೊದಲೇ ಪೊಲೀಸರು ಬರೆದಿದ್ದರು. ನಿಪಿ–2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಸ್ಥಳದಲ್ಲಿ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ನಿಪಿ–4 ಮತ್ತು 5 ಫೊಟೋಗಳಲ್ಲಿ ಕಾಡು ಕಡಿದಿರುದಾಗಲಿ, ಆರೋಪಿತರು ಶೆಡ್ ಗಳನ್ನು ಹಾಕಿರುದಾಗಲಿ ಕಾಣುವುದಿಲ್ಲ ಎಂದರೆ ಸಾಕ್ಷಿಯು ಸದರಿ ಫೊಟೋದಲ್ಲಿ ಕಾಣುವ ಅಂಬೇಡ್ಕರ್ ರವರ ಪ್ಲೆಕ್ಸ್ ಇಟ್ಟಿರುವ ಜಾಗದ ಸ್ವಲ್ಪ ಕೆಳಗೆ ಆರೋಪಿತರು ಶೆಡ್ ಗಳನ್ನು ಹಾಕಿರುತ್ತಾರೆ. ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ನಿಪಿ–2 ಮಹಜರಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ–2 ಮಹಜರಿಗೆ ಪೊಲೀಸರ ಕೋರಿಕೆಯ ಮೇರೆಗೆ ರಸ್ತೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.